**Crl.Misc. 30/2023**
**PW-01**

**ಸಾಕ್ಷಿಗೆ ಮೇರೆಗೆ ದಿಃ 24.10.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ SDB ವಕೀಲರಿಂದಃ**

ನಾನು ಶಾಲೆಯನು ಕಲೆತಿರುವುದಿಲ್ಲ. ಈ ಅರ್ಜಿಯನ್ನು ಜೀವನಾಂಶ ಕೋರಿ ಹೂಡಿರುತ್ತೇನೆ. ಅರ್ಜಿಯನ್ನು ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನ್ನ ಹಾಗೂ ಎದುರುದಾರನ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಈಗ ನೆನಪಿರುವುದಿಲ್ಲ. ನಾನು ಎದುರುದಾರನ ಜೊತೆ ಮದುವೆ ಆಗಿರುತ್ತೇನೆ ಎಂದು ತೋರಿಸಲು ಮದುವೆ ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಮದುವೆಯ ಫೋಟೊಗಳನ್ನು ಹಾಜರುಪಡಿಸಿರುವುದಿಲ್ಲ. ನನಗಿಂತ ಮುಂಚೆ ಎದುರುಗಾರನ ಜೊತೆಗೆ ನನ್ನ ಅಕ್ಕನ ಮದುವೆ ಆಗಿತ್ತು ಎಂದರೆ ಸಾಕ್ಷಿಯು ನಾನೇ ಮೊದಲನೇ ಹೆಂಡತಿಯಾಗಿದ್ದು ನನಗೆ ಎರಡು ಮಕ್ಕಳ ಆದ ನಂತರ ನಮ್ಮ ಅಕ್ಕ ಬಂದಿರುತ್ತಾಳೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನಾನೇ ಅಕ್ಕ ಎಂದು ಹೇಳುತ್ತಾರೆ. ಎದುರುಗಾರನ ಜೊತೆ ನನ್ನ ಅಕ್ಕನ ಮದುವೆ ಮೊದಲು ಆಗಿದ್ದು ಅವರಿಗೆ ಬಹಳ ದಿನಗಳ ಕಾಲ ಮಕ್ಕಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಬಹಳ ವರ್ಷಗಳ ಇರುವುದಿಲ್ಲ ಮದುವೆ ಆಗಿ ಎರಡು ವರ್ಷಗಳಲ್ಲಿ ಮಕ್ಕಳು ಆಗಿರುತ್ತವೆ ಎಂದು ಹೇಳುತ್ತಾರೆ. ನನ್ನ ಸಹೋದರಿಗೆ ಹಾಗೂ ಎದುರುಗಾರನಿಗೆ ಬಹಳ ದಿನಗಳ ಕಾಲ ಮಕ್ಕಳು ಆಗದೇ ಇರುವುದರಿಂದ ನನ್ನ ಹಾಗೂ ಎದುರುದಾರನ ಜೊತೆಗ ಸಲುಗೆ ಹೆಚ್ಚಾಗಿರುತ್ತದೆ ಎಂದರೆ ಸರಿಯಲ್ಲ. ಹೀಗೇ ಎದುರುದಾರನ ಜೊತೆಗೆ ನನ್ನ ಸಲುಗೆ ಹೆಚ್ಚಾಗಿ ನನ್ನ ಹಾಗೂ

ಎದುರುದಾರನ ನಮಗೆ ಸಂಬಂಧ ಬೆಳೆದು ಮಕ್ಕಳಾಗಿರುತ್ತವೆ ಹಾಗೂ ಎದುರುದಾರನ ಜೊತೆ ನಾನು ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹೀಗೆ ನಾನು ಎದುರುದಾರನ ಜೊತೆ ಮದುವೆ ಆಗದೇ ಇರುವ ಕಾರಣ ನನ್ನ ಮದುವೆಯ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಚಿಕ್ಕವಳಿದ್ದಾಗಲೇ ಎದುರುದಾರನ ಜೊತೆ ಮದುವೆ ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಸಹೋದರಿಯುವ ಸಹ ಚಿಕ್ಕವಳಿದ್ದಾಗಲೇ ಎದುರುದಾರನ ಜೊತೆ ಮದುವೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂಗಿಯ ಹೆಸರು ಮಹಾದೇವಿ. ನನ್ನ ತಂಗಿಯು ಚಿಕ್ಕವಳಿದ್ದಾಗಲೇ ಎದುರುದಾರನ ಜೊತೆ ಮದುವೆ ಆಗಿತ್ತು ಎಂದರೆ ಸಾಕ್ಷಿಯು ನನ್ನ ತಂಗಿಯನ್ನು ಬೇರೆಯವರಿಗೆ ಮದುವೆ ಮಾಡಿ ಕೊಟ್ಟಿತ್ತು ಅಲ್ಲಿಂದ ಬಿಟ್ಟು ನನ್ನ ಮನೆಗೆ ಬಂದಿರುತ್ತಾಳೆ ಆ ಸಮಯದಲ್ಲಿ ನನಗೆ ಎರಡು ಮಕ್ಕಳ ಆಗಿದ್ದವು ಎಂದು ಹೇಳುತ್ತಾರೆ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ,

**ಪ್ರ.ದ.ನ್ಯಾ.ದಂ. ಕಿತ್ತೂರು.**